5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಶಿವಮೊಗ್ಗ
(ಪೀಠಾಸೀನ, ಸಾಗರ)

ಎಸ್.ಸಿ. ಸಂಃ10038/2021

ಪಿಡಬ್ಲ್ಯೂ 04
ಸಿಡಬ್ಲ್ಯೂ 05

| | | |
|---|---|---|
| ಸಾಕ್ಷಿ ಹೆಸರು | - | ಪ್ರಭಾಕರ |
| ತಂದೆ ಹೆಸರು | - | ಮಂಚಪ್ಪ |
| ವಯಸ್ಸು | - | 34 ವರ್ಷ |
| ಉದ್ಯೋಗ | - | ವ್ಯವಸಾಯ |
| ವಿಳಾಸಃ | - | ಸಾರೇಕೊಪ್ಪ, ಸೊರಬ ತಾಲ್ಲೂಕು. |

ಪ್ರಮಾಣ ವಚನ ಭೋದಿಸಿದ ದಿನಾಂಕಃ 25-07-2022.

<u>ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರವರಿಂದಃ</u>

ಆರೋಪಿತರು ನನಗೆ ಗೊತ್ತು. ನನಗೆ ಪ್ರಾ.ಸಾ -1 ಮತ್ತು ಪ್ರಾ,ಸಾ-2 , ಚಾಸಾ-2, ಚಾಸಾ-6 ರಿಂದ ಚಾಸಾ-11 ರವರ ಪರಿಚಯ ಇದೆ. ಸಾರೇಕೊಪ್ಪದಲ್ಲಿ ನಮ್ಮ ಮನೆ ಕೆಳಗಿನ ಕೇರಿಯಲ್ಲಿ ಇರುತ್ತದೆ. ಪ್ರಾ,ಸಾ-1 , ಚಾಸಾ-2 ಮತ್ತು ಆರೋಪಿತರ ನಡುವೆ ಗಲಾಟೆಯಾದ ವಿಷಯ ಗೊತ್ತು. ದಿನಾಂಕಃ09-06-2019 ರಂದು ಸಂಜೆ 7-30 ಗಂಟೆ ಸಮಯದಲ್ಲಿ ಹುಣಸೆಕೊಪ್ಪದ ಮಂಜುನಾಥರವರ ಮನೆಯ ಎದುರು ರಸ್ತೆಯಲ್ಲಿ ಗಲಾಟೆಯಾಗುತ್ತಿತ್ತು. ಗಲಾಟೆ ಶಬ್ದ ಕೇಳಿ ನಾನು ಸ್ಥಳಕ್ಕೆ ಹೋಗಿರುತ್ತೇನೆ. ಆರೋಪಿತರು ಮತ್ತು ಪ್ರಾ.ಸಾ-1 ಮತ್ತು ಚಾಸಾ-2 ರವರು ಸ್ಥಳದಲ್ಲಿದ್ದು ಅವರ ನಡುವೆ ಘರ್ಷಣೆ ನಡೆಯುತ್ತಿತ್ತು. ಕಲ್ಲುಗಳು ಮತ್ತು ದೊಣ್ಣೆಗಳು ಸ್ಥಳದಲ್ಲಿ ಬಿದ್ದಿದ್ದವು. 3 ನೇ ಆರೋಪಿ ರಮೇಶ ಕಲ್ಲನ್ನು ತೆಗೆದುಕೊಂಡು ಬಂದಿದ್ದನು. 3 ನೇ ಆರೋಪಿ ರಮೇಶನು ಕಲ್ಲಿನಿಂದ ಚಾಸಾ-2 ರವರ ತಲೆಗೆ ಹೊಡೆದಿರುತ್ತಾನೆ ಆಗ ಚಾಸಾ-2 ಪ್ರಜ್ಞೆ ತಪ್ಪಿ ಬಿದ್ದಿರುತ್ತಾನೆ. ಪ್ರಾ.ಸಾ-1 ರವರಿಗೆ ಏನಾಗಿತ್ತು ನನಗೆ ಗೊತ್ತಿಲ್ಲ. ಕಲ್ಲಿನಿಂದ ಹೊಡೆದಿದ್ದರಿಂದ ಚಾಸಾ-2 ರವರ ತಲೆಗೆ ಗಾಯ ಆಗಿತ್ತು. ಸ್ಥಳದಲ್ಲಿ ತುಂಬಾ ಜನ ಸೇರಿದ್ದರು. ಸ್ಥಳದಲ್ಲಿ ಚಾಸಾ-6 , ಚಾಸಾ-8 , ಚಾಸಾ-9 ರವರು ಇದ್ದರು ಅವರನ್ನು ಬಿಟ್ಟು ಇನ್ನೂ ತುಂಬಾ ಜನ ಇದ್ದರು, ಆರೋಪಿಗಳು ಮತ್ತು ಪ್ರಾ.ಸಾ-1 ಮತ್ತು ಚಾಸಾ-2 ರವರ ನಡುವೆ ನಡೆಯುತ್ತಿದ್ದ ಗಲಾಟೆಯನ್ನು

ಬಿಡಿಸಿರುತ್ತೇವೆ. ನಾನು ಗಲಾಟೆಯನ್ನು ಬಿಡಿಸಿದ ನಂತರ ಯಾರು ಯಾರಿಗೆ ಏನು ಹೇಳಿದರು ಎಂದು ನನಗೆ ಗೊತ್ತಿಲ್ಲ. ಆರೋಪಿತರು ಕಲ್ಲುಗಳು ಮತ್ತು ದೊಣ್ಣೆಯನ್ನು ರಸ್ತೆಯಲ್ಲಿ ಬಿಸಾಕಿ ಹೋಗಿರುತ್ತಾರೆ.

ನಂತರ ಚಾಸಾ-2 ರವರನ್ನು ಪ್ರಾ.ಸಾ-1 , ಚಾಸಾ-6 ರವರು ಸೊರಬದ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕರೆದುಕೊಂಡು ಹೋಗಿರುತ್ತಾರೆ. ಸೊರಬದ ಸರ್ಕಾರಿ ಆಸ್ಪತ್ರೆಯಿಂದ ಚಾಸಾ-2 ರವರನ್ನು ಶಿವಮೊಗ್ಗದ ಮ್ಯಾಕ್ಸ್ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಘಟನೆ ಬಗ್ಗೆ ಪ್ರಾ,ಸಾ-1 ರವರು ಪೋಲೀಸರಿಗೆ ದೂರನ್ನು ನೀಡಿರುತ್ತಾರೆ. ಪ್ರಾ.ಸಾ-1 ರವರ ತೋಟದಲ್ಲಿ 1 ನೇ ಆರೋಪಿ ಬೆಂಕಿ ಹಚ್ಚಿದ್ದರಿಂದ ಬಾಳೆ ಗಿಡಗಳು ಸುಟ್ಟು ಹೋಗಿದ್ದರ ಸಂಬಂಧ ಅವರ ನಡುವೆ ಗಲಾಟೆ ಆಗಿರುತ್ತದೆ. ಆರೋಪಿತರು ಪ್ರಾ.ಸಾ-1 ಮತ್ತು ಚಾಸಾ-2 ರವರಿಗೆ ಯಾವ ಉದ್ದೇಶದಿಂದ ಹಲ್ಲೆ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಚಾಸಾ-2 ರವರು 2-3 ತಿಂಗಳುಗಳಿಂದ ಕೋಮಾ ಸ್ಥಿತಿಯಲ್ಲಿ ಇರುತ್ತಾನೆ. ಚಾಸಾ-2 ಈಗ ಮಾತನಾಡುವುದಿಲ್ಲ. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿತನು ಇಂದು ನ್ಯಾಯಾಲಯದ ಮುಂದೆ ಹಾಜರಿದ್ದು ಸಾಕ್ಷಿ ಅವರನ್ನು ನೋಡಿ ಗುರುತಿಸಿರುತ್ತಾರೆ.

ಸಾಕ್ಷಿಯು ಆರೋಪಿತರು ಕೃತ್ಯಕ್ಕೆ ಉಪಯೋಗಿಸಿದ 2 ಕಲ್ಲುಗಳು ಮತ್ತು ರೀಪೀಸ್ ನ್ನು ನೋಡಿ ಗುರುತಿಸಿರುತ್ತಾರೆ. ಅವುಗಳನ್ನು ಈಗಾಗಲೇ ಮು ಮಾ 1 ರಿಂದ ಮು ಮಾ -3 ಎಂದು ಗುರುತಿಸಲಾಗಿದೆ. ಘಟನೆಯ ಬಗ್ಗೆ ಪೋಲೀಸರಿಗೆ ನನ್ನ ಹೇಳಿಕೆಯನ್ನು ನೀಡಿರುತ್ತೇನೆ.

(ಮಾನ್ಯ ಸ.ಅ.ರವರು ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸುವಂತೆ ಕೋರಿದ್ದು, ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲಾಯಿತು)

ಪಾಟೀ ಸವಾಲುಃ ಮಾನ್ಯ ಸರಕಾರಿ ಅಭಿಯೋಜಕರವರಿಂದಃ

ಆರೋಪಿತರು ಪ್ರಾ.ಸಾ-1 ಮತ್ತು ಚಾಸಾ-2 ರವರನ್ನು ಕೊಲೆ ಮಾಡುವ ಉದ್ದೇಶದಿಂದ ಅವರನ್ನು ಅಡ್ಡಗಟ್ಟಿ ಅವರಿಗೆ ಏನ್ರೋ ಸೂಳೇ ಮಕ್ಕಳಾ ನಿಮ್ಮ ತಾಯಿನ ಹಡ ನಮ್ಮ ಮನೆತನದವರನ್ನು ವಿರುದ್ದ ಹಾಕಿಕೊಂಡು ಊರಿನಲ್ಲಿ ಹೇಗೆ ಜೀವನ ಮಾಡುತ್ತೀರಾ ಎಂದು

ಅವಾಚ್ಯವಾಗಿ ಬೈಯ್ಯುತ್ತ ನಿಮ್ಮನ್ನು ನಾವು ನೋಡಿಕೊಳ್ಳುತ್ತೇವೆ ಅಂತ ಕೂಗುತ್ತಿದ್ದರು ಎಂದರೆ ಆ ಸಮಯದಲ್ಲಿ ನಾನು ಇರಲಿಲ್ಲ.

ಅದೇ ಸಮಯಕ್ಕೆ ಮಳ್ಳಿ ರಮೇಶ ತನ್ನ ಕೈಯ್ಯಲ್ಲಿದ್ದ ಕಲ್ಲಿನಿಂದ ಸತೀಶನ ತಲೆಗೆ ಹೊಡೆದು ರಕ್ತಗಾಯಪಡಿಸಿದ್ದು ಮೈಕೈಗೆ ಹೊಡೆದು ರಕ್ತಗಾಯಪಡಿಸಿದ್ದು ಇದರ ಪರಿಣಾಮ ಸತೀಶ ಸ್ಥಳದಲ್ಲಿ ಕುಸಿದು ಬಿದ್ದಾಗ ಮಳ್ಳಿ ರಾಜಪ್ಪ, ಮಳ್ಳಿ ಪರಸಪ್ಪ , ಮಳ್ಳಿ ಅಣ್ಣಪ್ಪ ಮತ್ತು ಇತರೆಯವರು ಕೈಯಿಂದ ಸತೀಶನ ಮೈಕೈಗೆ ಹೊಡೆದು ಒಳಪೆಟ್ಟು ಮಾಡಿದದ್ದಲ್ಲದೇ ಕಾಲಿನಿಂದ ಒದ್ದು ಎಲ್ಲರೂ ಸೇರಿ ಮಾರಣಾಂತಿಕ ಹಲ್ಲೆ ಮಾಡಿ ಬಲವಾದ ರಕ್ತಗಾಯ ಮಾಡಿರುತ್ತಾರೆ ಎಂದರೆ ನಾನು ನೋಡಿಲ್ಲ.

ನಂತರ ಮಳ್ಳಿ ಲಿಂಗರಾಜನು ಚೇತನ್ ನ ಎರಡು ಕೈಗಳನ್ನು ಹಿಡಿದುಕೊಂಡಾಗ ಮಳ್ಳಿ ಲೋಕೇಶನು ತನ್ನ ಕೈಯ್ಯಲ್ಲಿದ್ದ ದೊಣ್ಣೆಯಿಂದ ಚೇತನನ ಹಿಂದಲೆಗೆ ಹೊಡೆದು ಒಳಪೆಟ್ಟು ಮಾಡಿದ್ದರಿಂದ ಚೇತನನು ಕೆಳಗೆ ಬಿದ್ದನು , ಆಗ ಚೇತನ್ ನ ಹಣೆಯ ಬಲಭಾಗದ ಮೇಲೆ ಮಳ್ಳಿ ಟಾಕಪ್ಪ ಈತನು ತನ್ನ ಕೈಯ್ಯಲ್ಲಿ ಹಿಡಿದುಕೊಂಡಿದ್ದ ಕಲ್ಲಿನಿಂದ ಹೊಡೆದು ರಕ್ತಗಾಯಪಡಿಸಿದನು ಎಂದರೆ ನನಗೆ ಗೊತ್ತಿಲ್ಲ.

ಆಗ ಮಳ್ಳಿ ಕುಟುಂಬದವರು ಸತೀಶ ಮತ್ತು ಚೇತನನಿಗೆ ಈ ದಿನ ನೀವುಗಳು ಉಳಿದುಕೊಂಡಿದ್ದೀರಿ ಇನ್ನು ಮುಂದೆ ನಮ್ಮ ತಂಟೆಗೆ ಬಂದರೆ ನಿಮ್ಮಗಳನ್ನು ಜೀವಸಹಿತ ಬಿಡುವುದಿಲ್ಲವೆಂದು ಜೀವಬೆದರಿಕೆ ಹಾಕಿದರು ಎಂದರೆ ಸಾಕ್ಷಿಯು ಬೈದಿದ್ದನ್ನು ನಾನು ಕೇಳಿಸಿಕೊಂಡಿಲ್ಲ ಎಂದು ನುಡಿಯುತ್ತಾರೆ.

ಆರೋಪಿತರು ಪ್ರಾ.ಸಾ-1 ಮತ್ತು ಚಾಸಾ-2 ರವನ್ನು ಕೊಲೆ ಮಾಡುವ ಉದ್ದೇಶದಿಂದ ಕಲ್ಲುಗಳು ಮತ್ತು ರೀಪೀಸ್ ನ್ನು ತೆಗೆದುಕೊಂಡು ಬಂದು ಹಲ್ಲೆ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಪೋಲೀಸರ ಮುಂದೆ ನೀಡಿದ ಹೇಳಿಕೆಯಲ್ಲಿ ಈ ಎಲ್ಲಾ ವಿಚಾರಗಳನ್ನು ಹೇಳಿರುತ್ತೇನೆ ಎಂದರೆ ಹೇಳಿರಬಹುದು 3-4 ವರ್ಷ ಆಗಿರುತ್ತದೆ ನನಗೆ ನೆನಪಿಲ್ಲ. ಹೇಳಿಕೆಯ ಸದರಿ ಭಾಗವನ್ನು ನಿಪಿ -8 ಹಾಗೂ ನಿಪಿ 8(ಎ) ರಿಂದ ನಿಪಿ 8 (ಡಿ) ಎಂದು ಗುರುತಿಸಲಾಯಿತು.

ಆರೋಪಿತರು ಪ್ರಾ.ಸಾ-1 ಮತ್ತು ಚಾಸಾ-2 ರವರನ್ನು ಕೊಲೆ ಮಾಡುವ ಉದ್ದೇಶದಿಂದ ಅವರೊಂದಿಗೆ ಗಲಾಟೆ ಮಾಡಿದ್ದು ಅದನ್ನು ನಾನು ನೋಡಿದ್ದರೂ ಸಹ , ಪೋಲೀಸರಿಗೆ ನನ್ನ ಹೇಳಿಕೆ ನೀಡಿದ್ದರು ಸಹ ಆರೋಪಿತರು ನಮ್ಮ ಊರಿನವರಾಗಿರುವುದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಆರೋಪಿತರ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀಸವಾಲಿಗೆ ಸಮಯ ನೀಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯ ಪ್ರಕಾರ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಣಗೊಳಿಸಲಾಯಿತು)

ಓ ಹೇ ಕೇ ಸ ಇದೆ

5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಶಿವಮೊಗ್ಗ (ಪೀಠಾಸೀನ, ಸಾಗರ).